# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 963

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 11.03.2026

ಉತ್ತರಿಸುವ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಪ್ರಸ್ತುತ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಖಾಲಿಯಿರುವ ಹುದ್ದೆಗಳೆಷ್ಟು:</td><td>ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿನ ವೃಂದವಾರು ಹುದ್ದೆಗಳ ವಿವರ ಈ ಕೆಳಕಂಡಂತಿದೆ-
<table>
<tr><th>ವೃಂದ</th><th>ಮಂಜೂರು</th><th>ಭರ್ತಿ</th><th>ಗುತ್ತಿಗೆ/ ಹೊರಗುತ್ತಿಗೆ</th><th>ಖಾಲಿ</th></tr>
<tr><td>ಎ</td><td>3432</td><td>1990</td><td>367</td><td>1075</td></tr>
<tr><td>ಬಿ</td><td>282</td><td>175</td><td>0</td><td>107</td></tr>
<tr><td>ಸಿ</td><td>7423</td><td>3839</td><td>200</td><td>3384</td></tr>
<tr><td>ಡಿ</td><td>7371</td><td>1139</td><td>3724</td><td>2508</td></tr>
<tr><td>ಒಟ್ಟು</td><td>18508</td><td>7143</td><td>4291</td><td>7074</td></tr>
</table>
</td></tr>
<tr><td>ಆ)</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಸಿಬ್ಬಂದಿಗಳ ಪೈಕಿ ಸುಮಾರು 84% ಹುದ್ದೆಗಳು ಖಾಲಿಯಿರುವುದರಿಂದ ರೈತರು ಹೈನುಗಾರಿಕೆಯಿಂದ ಹಿಂದೆ ಸರಿಯುತ್ತಿರುವುದು ಹಾಗೂ ಹೈನುಗಾರಿಕೆ ಕ್ಷೇತ್ರ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದರ ಪರಿಣಾಮವಾಗಿ ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಮೇಲೆ ಏನೆಲ್ಲ ಪರಿಣಾಮಗಳು ಉಂಟಾಗಿವೆ ಎಂಬ ಕುರಿತು ಸರ್ಕಾರದ ಮೌಲ್ಯಮಾಪನ ವರದಿ ಇದೆಯೇ:</td><td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಒಟ್ಟು ಹುದ್ದೆಗಳ ವಿವರ ಈ ಕೆಳಕಂಡಂತಿದೆ-
<table>
<tr><th>ವೃಂದ</th><th>ಮಂಜೂರು</th><th>ಭರ್ತಿ</th><th>ಗುತ್ತಿಗೆ/ ಹೊರಗುತ್ತಿಗೆ</th><th>ಖಾಲಿ</th></tr>
<tr><td>ಪಶುವೈದ್ಯಾಧಿಕಾರಿಗಳು</td><td>74</td><td>31</td><td>4</td><td>39</td></tr>
<tr><td>'ಬಿ' ವೃಂದದ ಸಿಬ್ಬಂದಿಗಳು</td><td>7</td><td>3</td><td>0</td><td>4</td></tr>
<tr><td>'ಸಿ' ವೃಂದದ ಸಿಬ್ಬಂದಿಗಳು</td><td>198</td><td>41</td><td>0</td><td>157</td></tr>
<tr><td>ಡಿ-ದರ್ಜೆ ನೌಕರರು</td><td>170</td><td>02</td><td>94</td><td>74</td></tr>
<tr><td>ಒಟ್ಟು</td><td>449</td><td>77</td><td>98</td><td>274</td></tr>
</table>
ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾದ ಸಿಬ್ಬಂದಿಗಳ ಪೈಕಿ ಶೇ.61 ರಷ್ಟು ಹುದ್ದೆಗಳು ಖಾಲಿ ಇದ್ದು, ಖಾಲಿ ಇರುವ ಪಶುವೈದ್ಯ ಸಂಸ್ಥೆಗಳಿಗೆ ಹತ್ತಿರದ ಪಶುವೈದ್ಯರು ಮತ್ತು ತಾಂತ್ರಿಕ ಸಿಬ್ಬಂದಿಗಳಿಗೆ ಹೆಚ್ಚುವರಿ ಪ್ರಭಾರವಹಿಸಿ ಪಶುವೈದ್ಯಕೀಯ ಸೇವೆಗಳನ್ನು ರೈತರಿಗೆ ಒದಗಿಸಲಾಗುತ್ತಿದೆ. ಪಶುಸಂಜೀವಿನಿ ಯೋಜನೆಯಡಿ</td></tr>
</table>

<table>
<tr><td></td><td></td><td>ರೈತರ ಮನೆ ಬಾಗಿಲಿಗೆ ತೆರಳಿ ಜಾನುವಾರುಗಳಿಗೆ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ.<br><br>ಈ ಎಲ್ಲಾ ಕ್ರಮಗಳಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಹೈನುಗಾರಿಕೆಯಿಂದ ಹಿಂದೆ ಸರಿಯುತ್ತಿರುವುದಾಗಲೀ ಅಥವಾ ಹೈನುಗಾರಿಕೆ ಕ್ಷೇತ್ರ ಕುಸಿಯುತ್ತಿರುವುದಾಗಲೀ ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ.<br><br>ಹಾಲು ಉತ್ಪಾದನೆ ಮೇಲೆ ಉಂಟಾಗುವ ಪರಿಣಾಮಗಳ ಕುರಿತು ಸರ್ಕಾರದ ಮೌಲ್ಯ ಮಾಪನ ಕೈಗೊಂಡಿರುವುದಿಲ್ಲ. ಆದರೆ, ಈ ಕೆಳಗಿನ ಅಂಕಿ-ಅಂಶದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಲಿನ ಸಂಗ್ರಹಣೆ ಹೆಚ್ಚಾಗುತ್ತಿರುವುದು ಕಂಡು ಬಂದಿರುತ್ತದೆ-
<table>
<tr><th>ಕ್ರಮ ಸಂಖ್ಯೆ</th><th>ವರ್ಷ</th><th>ಪ್ರತಿ ದಿನ ಸರಾಸರಿ ಹಾಲು ಸಂಗ್ರಹಣೆ</th></tr>
<tr><td>1</td><td>2024-25</td><td>2,33,132 ಲೀ</td></tr>
<tr><td>2</td><td>2025-26</td><td>2,59,223 ಲೀ</td></tr>
</table>
</td></tr>
<tr><td>ಇ)</td><td>ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ, ವೈದ್ಯರ ಲಭ್ಯತೆ ವಿಳಂಬ ಹಾಗೂ ಮೂಲ ಸೌಲಭ್ಯಗಳ ಅಭಾವದಿಂದ ಸೇವೆ ನೀಡಲು ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದರೆ, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಬಂದಿದೆ,<br><br>ಖಾಲಿ ಇರುವ ಪಶುವೈದ್ಯ ಸಂಸ್ಥೆಗಳಿಗೆ ಹತ್ತಿರದ ಪಶುವೈದ್ಯರು ಮತ್ತು ತಾಂತ್ರಿಕ ಸಿಬ್ಬಂದಿಗಳಿಗೆ ಹೆಚ್ಚುವರಿ ಪ್ರಭಾರವಹಿಸಿ ಪಶುವೈದ್ಯಕೀಯ ಸೇವೆಗಳನ್ನು ರೈತರಿಗೆ ಒದಗಿಸಲಾಗುತ್ತಿದೆ. ಪಶು ಸಂಜೀವಿನಿ ಯೋಜನೆಯಡಿ ರೈತರ ಮನೆ ಬಾಗಿಲಿಗೆ ತೆರಳಿ ಜಾನುವಾರುಗಳಿಗೆ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ.<br><br>400 ಪಶುವೈದ್ಯಾಧಿಕಾರಿಗಳ ಖಾಯಂ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ಹೆಚ್ಚುವರಿಯಾಗಿ 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆಯು ಹಾಗೂ ಪಶುವೈದ್ಯಕೀಯ ಪರೀಕ್ಷಕರ 300 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಹಂತದಲ್ಲಿರುತ್ತದೆ.</td></tr>
<tr><td>ಈ)</td><td>ಜಿಲ್ಲೆಯಲ್ಲಿ ಖಾಲಿ ಇರುವ ಪಶುವೈದ್ಯರ ಹಾಗೂ ಇತರೆ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ</td><td>ಇಲಾಖೆಯಲ್ಲಿನ ಪಶುವೈದ್ಯರ ಹಾಗೂ ಇತರೆ ಸಿಬ್ಬಂದಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಯಾವುದೇ ವೇಳಾಪಟ್ಟಿಯನ್ನು ನಿಗದಿಪಡಿಸಿರುವುದಿಲ್ಲ.</td></tr>
</table>

| | | |
|---|---|---|
| | ವೇಳಾಪಟ್ಟಿಯನ್ನು ನಿಗದಿಪಡಿಸಿದೆ: ತಾತ್ಕಾಲಿಕವಾಗಿ ಹೊರಗುತ್ತಿಗೆ/ ಒಪ್ಪಂದ ಆಧಾರದ ನೇಮಕಾತಿ ಮೂಲಕ ಸೇವೆಯನ್ನು ಬಲಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ; ಈ ಕುರಿತು ಯಾವಾಗ ಕ್ರಮವಹಿಸಲಾಗುವುದು: | 400 ಪಶುವೈದ್ಯಾಧಿಕಾರಿಗಳ ಖಾಯಂ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ಹೆಚ್ಚುವರಿಯಾಗಿ 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆ ಹಂತದಲ್ಲಿರುತ್ತದೆ. |
| ಉ) | ಒಟ್ಟಾರೆಯಾಗಿ ರಾಜ್ಯದಲ್ಲಿ ಹೈನುಗಾರಿಕೆ ಕುಸಿತವಾಗುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ತಕ್ಷಣ ಪಶುವೈದ್ಯಕೀಯ ಸೇವೆ ಲಭ್ಯವಾಗುವಂತೆ ಹಾಗೂ ಹಾಲು ಉತ್ಪಾದನೆ ಹೆಚ್ಚಿಸಲು ಸರ್ಕಾರ ಯಾವ ವಿಶೇಷ ಕಾರ್ಯಯೋಜನೆ ರೂಪಿಸಿದೆ? | ರಾಜ್ಯದಲ್ಲಿ ಹೈನುಗಾರಿಕೆ ಉದ್ಯಮ ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಹೊಂದುತ್ತಿದೆ.<br><br>ಪಶುಸಂಜೀವಿನಿ ಯೋಜನೆಯಡಿಯಲ್ಲಿ ರೈತರಿಗೆ ತುರ್ತು ಪಶುವೈದ್ಯಕೀಯ ಸೇವೆಗಳನ್ನು ರೈತರ ಮನೆ ಬಾಗಿಲಿಗೆ ತೆರಳಿ ನೀಡಲಾಗುತ್ತಿದೆ.<br><br>ಹಾಲು ಉತ್ಪಾದನೆ ಹೆಚ್ಚಿಸಲು ಉತ್ಕೃಷ್ಟ ಗುಣಮಟ್ಟದ ಹೋರಿ ತಳಿಯ ವೀರ್ಯ ನಳಿಕೆಗಳಿಂದ ಕೃತಕ ಗರ್ಭ ಧಾರಣೆ ಕೈಗೊಂಡು ಗುಣ ಮಟ್ಟದ ಜಾನುವಾರು ಸಂತತಿ ಅಭಿವೃದ್ಧಿಯಾಗಿ, ಹಾಲಿನ ಉತ್ಪಾದನೆ ಹೆಚ್ಚಾಗುತ್ತಿದೆ. ಅಲ್ಲದೆ ಲಿಂಗನಿರ್ಧಾರಿತ ವೀರ್ಯ ನಳಿಕೆ ಬಳಸಿ ಕೃತಕ ಗರ್ಭ ಧಾರಣೆ ಕೈಗೊಂಡು ರೈತರಿಗೆ ಉತ್ಕೃಷ್ಟ ತಳಿಯ ಹಾಗೂ ಹೆಚ್ಚು ಹಾಲು ಕೊಡುವ ಹೆಣ್ಣು ಕರುಗಳನ್ನು ಹೊಂದಲು ಕ್ರಮಕೈಗೊಳ್ಳಲಾಗಿದೆ.<br><br>ಹಾಲು ಪ್ರೋತ್ಸಾಹಧನ ಪ್ರತಿ ಲೀಟರ್ ಗೆ ರೂ.5/- ರಂತೆ ನೀಡುವ ಮುಖಾಂತರ ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಳ್ಳಲು ನೆರವಾಗಿದೆ.<br><br>ರಾಸುಗಳ ಆಕಸ್ಮಿಕ ಆಪತ್ತು ನಿಧಿ ಯೋಜನೆಯಡಿ ಮರಣ ಹೊಂದಿದ ವಿಮಾ ರಹಿತ ರಾಸುಗಳಿಗೆ ರೂ.15000/- ದವರೆವಿಗೂ ಪರಿಹಾರ ನೀಡಲಾಗುತ್ತಿದೆ.<br><br>ಜಾನುವಾರುಗಳ ವಿವಿಧ ರೋಗ ನಿಯಂತ್ರಣಕ್ಕಾಗಿ ದನ ಮತ್ತು ಎಮ್ಮೆಗಳಿಗೆ ಕಾಲ ಕಾಲಕ್ಕೆ ಯಶಸ್ವಿಯಾಗಿ ಲಸಿಕೆ ಹಾಕುತ್ತಿರುವುದರಿಂದ ಗುರುತರವಾದ ರೋಗೋದ್ರೇಕಗಳು ಕಾಣಿಸಿಕೊಂಡಿರುವುದಿಲ್ಲ.<br><br>• ಜಾನುವಾರುಗಳ ಮೇವಿಗಾಗಿ ಮೇವಿನ ಕಿರುಪೊಟ್ಟಣಗಳನ್ನು ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.<br>• ಜಾನುವಾರುಗಳ ಉತ್ತಮ ನಿರ್ವಹಣೆಗಾಗಿ ರಬ್ಬರ್ ನೆಲಹಾಸು ಹಾಗೂ ಮೇವು ಕತ್ತರಿಸುವ ಯಂತ್ರಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದೆ. |

ಆದ್ದರಿಂದ ಹಾಲಿನ ಉತ್ಪಾದನೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ.

ಪ್ರಸ್ತುತ ಮೂರು ವರ್ಷಗಳಲ್ಲಿ ರಾಜ್ಯದ ಹಾಲು ಮಹಾಮಂಡಳದ ಪ್ರತಿ ದಿನದ ಸರಾಸರಿ ಹಾಲು ಸಂಗ್ರಹಿಸಿದ ವಿವರ ಈ ಕೆಳಕಂಡಂತಿದೆ-

| ಕ್ರಮ ಸಂಖ್ಯೆ | ವರ್ಷ | ಸರಾಸರಿ ಹಾಲು ಸಂಗ್ರಹಣೆ (ಕೆ.ಜಿ. / ದಿನ) |
|---|---|---|
| 1 | 2023-24 | 82.92 ಲಕ್ಷ |
| 2 | 2024-25 | 88.07 ಲಕ್ಷ |
| 3 | 2025-26 (ಜನವರಿ–26ರವರೆಗೆ) | 1 ಕೋಟಿ |

**ಸಂಖ್ಯೆ: ಪಸಂಮೀ ಇ-70 ಪಲಸೇ 2026**

(ಸಹಿ)

**(ಕೆ. ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.